International Journal of Kannada Research
www.kannadajournal.com

ISSN: 2454–5813
IJSR 2017; 3(1): 178-180
© 2017 IJKS
www.kannadajournal.com
Received: 11-11-2016
Accepted: 20-12-2016

**ಡಾ. ಧನಂಜಯ ಬಿ.ಜಿ**
ಸಹ ಪ್ರಾಧ್ಯಾಪಕರು ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಮನೆ, ಭದ್ರಾವತಿ, ಕರ್ನಾಟಕ, ಭಾರತ

**Correspondence**
**ಡಾ. ಧನಂಜಯ ಬಿ.ಜಿ**
ಸಹ ಪ್ರಾಧ್ಯಾಪಕರು ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಮನೆ, ಭದ್ರಾವತಿ, ಕರ್ನಾಟಕ, ಭಾರತ

# ಶರಣರು – ಸಮದರ್ಶಿತ್ವ, ಸಮಾನತೆ ಮತ್ತು ಸಮ ಸಮಾಜ

**ಡಾ. ಧನಂಜಯ ಬಿ.ಜಿ**

**ಪೀಠಿಕೆ**

ವಚನ ಎಂಬುದು ವೈಶಿಷ್ಟ್ಯತೆಯನ್ನು ಹೊಂದಿದ ಸಾಹಿತ್ಯದ ಪ್ರಕಾರ ಇಂತಹ ಒಂದು ಸಾಹಿತ್ಯ ಸೃಷ್ಟಿಗೆ ಕಾರಣದವರು 12ನೇ ಶತಮಾನದ ಶಿವಶರಣರು. ಯಾವುದೇ ರೀತಿಯ ಔಪಚಾರಿಕ ಶಿಕ್ಷಣವನ್ನು ಪಡೆಯದೇ ಇಂತಹ ಒಂದು ಅಭೂತಪೂರ್ವ ಸಾಹಿತ್ಯಕ್ಕೆ ಮುನ್ನುಡಿ ಬರೆದ ಶರಣರು ನಾಡಿನ ಕೀರ್ತಿಯನ್ನು ಉತ್ತುಂಗಕ್ಕೆ ಏರಿಸಿದ್ದಾರೆ. ಭಾರತದ ಮೊದಲ ಮುಕ್ತ ಸಾಮಾಜಿಕ ಚಿಂತಕರು ಎಂಬ ಖ್ಯಾತಿಗೆ ಭಾಜನರಾಗಿದ್ದಾರೆ. ಸುಮಾರು 850 ವರ್ಷಗಳ ಹಿಂದೆ ಆರಂಭಿಸಿದ ಈ ಚಳುವಳಿ ಅದ್ವಿತೀಯವಾದುದು.

12ನೇ ಶತಮಾನದಲ್ಲಿ ಐರೋಪ್ಯ ರಾಷ್ಟ್ರಗಳಲ್ಲಿ ಸಮಾನತೆಯ ಅಥವಾ ಸಮದರ್ಶಿತ್ವದ ಕನಸು ಮತ್ತು ಕಲ್ಪನೆಯು ಇಲ್ಲದ ಹೊತ್ತಿನಲ್ಲಿ ಶರಣರು ಸಮಗ್ರ ಸಮದರ್ಶಿತ್ವದ ಪರಿಕಲ್ಪನೆಯನ್ನು ಪರಿಚಯಿಸಿದ್ದು, ಸಾಮಾಜಿಕ ಚಲನೆಗೆ ಕಾರಣವಾಯಿತು. ಅಲ್ಲದೆ ದಲಿತರು, ಮಹಿಳೆಚುರು ಮತ್ತು ಸಮಾಜದ ವಿವಿಧ ಸ್ತರದ ಕಾಯಕ ಜೀವಿಗಳು ಒಂದಾಗಿ ನವ ಸಾಮಾಜಿಕ ವ್ಯವಸ್ಥೆಗೆ ನಾದಿ ಹಾಡುವ ಶರಣ ಸಂಕುಲವನ್ನು ಸೃಷ್ಟಿಸಿ ಕಾಯಕ ಮತ್ತು ದಾಸೋಹ ಪ್ರಜ್ಞೆಯೊಂದಿಗೆ ಒಂದಾಗಿ ಬದುಕಿದ್ದು ಶರಣರ ಸಮದರ್ಶಿತ್ವಕ್ಕೆ ಧ್ಯೋತಕವಾತದೆ.

ಶರಣರ ಸಮದರ್ಶಿತ್ವಕ್ಕೆ ಒಂದು ಪ್ರಮುಖ ನಿದರ್ಶನವೆಂದರೆ ಉನ್ನತ ಜಾತಿಯಲ್ಲಿ ಜನಿಸಿ, ಕೆಳ ಜಾತೀಕರಣಕ್ಕೆ ಒಳಗಾದ ಭಾರತದ ಒಬ್ಬನೇ ಒಬ್ಬ ಮಹಾಪುರುಷ ಬಸವಣ್ಣ. ಅನೇಕ ಮಹಾತ್ಮರು ದಲಿತರಿಗಾಗಿ, ಸಮಾನತೆಗಾಗಿ ತಮ್ಮ ಜೀವವನ್ನು ತೇಯ್ದಿದ್ದಾರೆ. ಆದರೆ ಬಸವಣ್ಣನ ಹಾಗೆ ಕೆಳಜಾತೀಕರಣಕ್ಕೆ ಒಳಗಾದ ಉದಾಹರಣೆಯಿಲ್ಲ. 12ನೇ ಶತಮಾನದ ಶರಣರ ದೂರದೃಷ್ಟಿಯ ಸಮದರ್ಶಿತ್ವ 21ನೇ ಶತಮಾನದ ವರ್ತಮಾನಕ್ಕೆ ಪ್ರಸ್ತುತವಾದದ್ದು ನಿಜಕ್ಕೂ ಯೋಗಾಯೋಗ ಎನ್ನಬಹುದು.

ಶರಣರ ಸಮದರ್ಶಿತ್ವ ಘನ ಆದರ್ಶ ಸಾಮಾಜಿಕ ಪ್ರಜ್ಞೆಯ ಮಿಡಿತಕ್ಕೆ ಅನುಗುಣವಾಗಿ ಆಕಾರ ಪಡೆಯಿತು. ವಚನಗಳು ಮೂಡಿಬಂದಿದ್ದು, ಒಂದು ಅಂದೋಲನದ ಕಾಲವಾದ್ದರಿಂದ ಅಲ್ಲ ವೈಯುಕ್ತಿಕತೆಗಿಂತ ಸಾಮಾಜಿಕ ಪ್ರಜ್ಞೆಗೂ ಅವಕಾಶವಾಯಿತು. ಶರಣರ ಅಥವಾ ವಚನಕಾರ ಧ್ಯೇಯ ಜನಸಾಮಾನ್ಯರ ಕಲ್ಯಾಣ. ವಚನ ಒಂದು ಕ್ಷಣದ ತೀವ್ರ ಭಾವನೆಯ ಅಭಿವ್ಯಕ್ತಿಯ ವಿಶಿಷ್ಟ ಸಂದರ್ಭ ಶರಣರ ಸಮಾನತೆ ಮತ್ತು ಸಮದರ್ಶಿತ್ವದಿಂದ ಪ್ರತಿಪಾದಿಸಿದ ಅಂಶಗಳು ಜನಪರ ಮೌಲ್ಯವನ್ನು ಹೊಂದಿದ್ದು, ಸಮಾಜದಲ್ಲಿ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಕ್ರಾಂತಿಯನ್ನುಂಟು ಮಾಡಿದವು ಎಚಿದರೆ ಅತಿಶಯೋಕ್ತಿಯಾಗಲಾರದು. ಶಿವಶರಣರ ಜನಪರ ಸ್ಥಧಾರಣೆ ಮತ್ತು ವಚನ ಸಾಹಿತ್ಯದ ಒಟ್ಟು ಧೋರಣೆ ಸಮಾಜದಲ್ಲಿನ ಕಟ್ಟಕಡೆಯ ವ್ಯಕ್ತಿಗೆ ಆತ್ಮವಿಶ್ವಾಸ ಮತ್ತು ಆತ್ಮ ಸ್ಥೈರ್ಯವನ್ನು ತುಂಬುವುದು. ಈ ನಿಟ್ಟಿನಲ್ಲಿ ಶರಣರು ಯಶಸ್ಸನ್ನು ಸಾಧಿಸಿದ್ದಾರೆ. ಶರಣರು ವೈಚಾರಿಕವಾಗಿ ದಿಟ್ಟ ಪ್ರಣಾಳಿಕೆಯಿಂದ ಪ್ರತಿಭಟಿಸಿ ಪರ್ಚುರ್ಯಾಯ ಸಮಾನತೆಯ ವೈಶಿಷ್ಟ್ಯತೆಯೊಂದನ್ನು ಕಂಡುಕೊಂಡರು.

ಶರಣರ ವಚನಗಳು / ಚಳುವಳಿ ಸಮಾಜ ಮತ್ತು ವ್ಯಕ್ತಿಯ ನಡುವಣ ಸಂಬಂಧದ ಕುರಿತಾದದ್ದು. ಹಳೆಯ ಸಾಮಾಜಿಕ ವ್ಯವಸ್ಥೆಯಲ್ಲಿ ಓರ್ವ ವ್ಯಕ್ತಿಯ ಅಂತಸ್ತು ಸ್ಥಾನಮಾನಕ್ಕೆ ಅವನ ಜನನ ಅಥವ ಹುಟ್ಟು ಕಾರಣವಾಗಿತ್ತು. ಆದರೆ ಶರಣರು ಕಟ್ಟಬಯಸಿದ ಸಮಾಜದಲ್ಲಿ ಸಮಾನತೆಯನ್ನು ಭೂಮಿಕೆಯನ್ನಾಗಿ ಮಾಡಿಕೊಂಡರು. ಇದು ಶರಣ ಸಾಹಿತ್ಯದ ವಿಶೇಷ

ಎನ್ನಬಹುದು. ಸಮಾಜದ ಸದಸ್ಯನಾದ ವ್ಯಕ್ತಿಯು ಸಮಾಜವು ತನಗೆ ನೀಡಿದ ಭದ್ರತೆಗೆ ಬದಲಾಗಿ ಸಮಾಜದ ಅಭಿವೃದ್ದಿಗೆ ದುಡಿಯಬೇಕು. ಈ ಮೂಲಕ ಸಮಾಜದ ಋಣವನ್ನು ತೀರಿಸಬೇಕು ಎಂಬ

ಆಶಯ ಶರಣರದು. ಶರಣರ ದೃಷ್ಟಿಯಲ್ಲಿ ಭಕ್ತಿ ಜನರಲ್ಲಿ ಸಮಾನತೆಯನ್ನ ತರುವ ಸಾಧನ, ವಚನ ಚಳುವಳಿ ಕನ್ನಡ ನಾಡಿನ ಕೆಳವರ್ಗದ ಜನರಲ್ಲಿ ದಢೀರನೆ ಮಾಡಿಸಿದ ಆತ್ಮವಿಶ್ವಾಸದ ಹಾಗೂ ಸಮದರ್ಶಿತ್ವದ ಸಂಕೇತ. ಶರಣ ಸಾಹಿತ್ಯದಿಂದ ಅಸಂಖ್ಯಾತ ಬರಹಗಾರರು ಮೂಡಿಬಂದರು. ಸುಮಾರು 200ಕ್ಕೂ ಹೆಚ್ಚು ವಚನಗಾರರು, 35 ಮಹಿಳಾ ವಚನಗಾರ್ತಿಯರು ಕನ್ನಡದ ಪ್ರಥಮ ಬರಹಗಾರ್ತಿಯರು. ಶರಣರ ಸಮದರ್ಶಿತ್ವದ ಚಳುವಳಿ ಸ್ತ್ರೀಯು ತಾನು ಹೆಣ್ಣೆಂಬ ಪ್ರಜ್ಞೆ ಮೀರಿ ತಾನೊಂದು ಶಕ್ತಿ ಅಥವಾ ಚೈತನ್ಯವೆಂಬ ಪ್ರಜ್ಞೆ ಬೆಳೆಸಿಕೊಂಡಳು. ವಚನಗಳಿಂದ ಕನ್ನಡ ಭಾಷೆಗೆ ದೊರಕಿದ ನೈತಿಕ ಔನ್ನತ್ಯ ಅವಿಸ್ಮರಣೀಯವಾದದ್ದು. ವಚನಗಳು ಪ್ರಮಾಣ ವಾಕ್ಯಗಳಾಗಿರುವುದರಿಂದ ಕನ್ನಡದ ಬಗ್ಗೆ ಪ್ರಜ್ಞ ಭಾವನೆ ಬೆಳೆಯಿತು. ಅಲ್ಲದೇ ಭಾರತೀಯ ಚಿಂತನೆ ವ್ಯಕ್ತಿಪರ ಎಂಬ ಆರೋಪಕ್ಕೆ ಪ್ರತಿಯಾಗಿ ಸಮಾಜ ಪರ ಚಿಂತನೆ ಎಂಬ ಉತ್ತರವನ್ನು ವಚನಗಳ ಮೂಲಕ ಶರಣರು ನೀಡಿದ್ದು, ಅವರ ನೈಜ ಸಮದರ್ಶಿತ್ವಕ್ಕೆ ಉದಾಹರಣೆ ಎನ್ನಬಹುದು.

ಶರಣರು, ಸಾಹಿತಿಗಳಲ್ಲ, ಸಾಹಿತ್ಯವನ್ನು ಶಾಸ್ತ್ರೀಯವಾಗಿ ಅಭ್ಯಸಿಸಿದವರಲ್ಲ. ಹಾಗು ಸಾಹಿತ್ಯ ನಿರ್ಮಾಣ ಮಾಡಬೇಕೆಂಬ ಯಾವ ಹಂಬಲವೂ ಇರಲಿಲ್ಲ. ಶರಣರ ವಚನಗಳು ತಮ್ಮ ಶ್ರೇಷ್ಠತೆಯ ನೆಲೆಯಲ್ಲಿ ಭಕ್ತಿ ಸಾಚಾತನವನ್ನು ಸಂದೇಹಕ್ಕೆ ಆಸ್ಪದವಿಲ್ಲದಂತೆ ಸಮಾನತೆ ಮತ್ತು ಸಮದರ್ಶಿತ್ವದ ನೆಲೆಯಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ. ಶರಣರು ತಮ್ಮ ಸುತ್ತಲಿನ ಜನಸಮೂಹವನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಬೇಕೆಂಬ ತೀವ್ರ ಹಂಬಲ ಅವರ ಸಮದರ್ಶಿತ್ವಕ್ಕೆ ಮತ್ತೊಂದು ನಿದರ್ಶನವೆನ್ನಬಹ್ಮದು. ಪ್ರಜಾ ಸ್ವತಂತ್ರ, ಸ್ತ್ರೀ ಸಮಾನತೆ, ಜಾತಿ ನಾಶ ಲಿಂಗ ಸಮಾನತೆ ಮುಂತಾದವು ಶರಣರ ಸಮದರ್ಶಿತನಕ್ಕೆ ಪೂರಕ.

ಶರಣದ ದೃಷ್ಟಿಯಲ್ಲಿ ಸಮಾನತೆ ಈ ಕೆಳಗಿನ 3 ಅಂಶಗಳಲ್ಲಿ ಪ್ರಬಲವಾಗಿ ವ್ಯಕ್ತವಾಗಿದ್ದು ಅವುಗಳೆಚಿದರೆ ಸಮರತಿ (ಲಿಂಗ ಸಮಾನತೆ) ಸಮಕಳೆ (ಜಾತಿ ಮತ್ತು ವರ್ಣ ಸಮಾನತೆ) ಮತ್ತು ಸಮಸುಖ (ವರ್ಗ ಸಮಾನತೆ) ಅರಿಯಬೇಕೆಂದು ಶರಣರ ಒತ್ತಾಸೆಯಾಗಿದೆ. ಅಲ್ಲದೆ ಅನುಭವ ಮಂಟಪ ಸರ್ವಜಾತಿ ಜನಾಂಗಗಳ ಸಮೂಹ ಪ್ರಜ್ಞೆಯ ಸಮಜೋಧಾರ್ಮಿಕ ಸಂಸ್ತಿನ ಪ್ರಜ್ಞೆಯಂತಿದೆ. ಸ್ತ್ರೀಯರ ಶಿಕ್ಷಣ, ಕೆಳಜಾತಿಗಳ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣ ವಿಚಾರಗಳು ಬಸವಣ್ಣನವರ ನೈತೃತ್ವದಲ್ಲಿ ಶರಣರೊಂದಿಗೆ ಈ ಎಲ್ಲಾ ಪ್ರಜಾಪ್ರಭುತ್ವದ ಪ್ರಯೋಗಗಳು ಕಲ್ಯಾಣದಲ್ಲಿ ನಡೆದದ್ದೊಂದು ವಿಶೇಷ.

ಅಸ್ಪೃಶ್ಯತೆ, ಗುಲಾಮಗಿರಿ ಮೊದಲು ಮಾಡಿ ಭಾರತದ ಎಲ್ಲಾ ದುರಂತಗಳಿಗೆ ಜಾತಿ ವ್ಯವಸ್ಥೆಯೇ ಕಾರಣವಾತಿದೆ. ಭಾರತದಲ್ಲಿ ಜಾತಿಯನ್ನು ಮೀರಿ ಬಹು ಜನರ ಹಿತಕ್ಕಾಗಿ ಚಿಂತಿಸುವ ಕ್ರಮವನ್ನು ಭಗವಾನ್ ಬುದ್ದ ತೋರಿಸಿಕೊಟ್ಟರು. ಬಸವಣ್ಣನವರು ಅದನ್ನೊಂದು ಚಳುವಳಿಯಾಗಿ ರೂಪಿಸಿ, ಶರಣರ ಪಾಲ್ಗೊಳ್ಳುವಿಕೆ ಮತ್ತು ಅರಿವಿಗೆ ಕಾರಣರಾದರು. ಆದ್ದರಿಂದ ಜಾತಿ ವಿನಾಶ ಮಾಡದೇ ಏನನ್ನ ಸಾಧಿಸಲಿಕ್ಕಾಗದು ಎಂಬುದು ಶರಣರ ದೃಢ ನಿರ್ಧಾರವಾಗಿತ್ತು.

## ಶರಣರ ಕಲ್ಪನೆಯ ಸಮದರ್ಶಿತ್ವದ ವಿವಿಧ ಆಯಾಮಗಳು

ಶರಣರ ವಿಚಾರಧಾರೆ ಮತ್ತು ವ್ಯಕ್ತಿತ್ವದಲ್ಲಿ ಎದ್ದು ಕಾಣುವ ಒಂದು ಮುಖ್ಯವಾದ ಅಂಶವೆಂದರೆ, ಅವರ ಅಪಾರವಾದ ಸಾಮಾಜಿಕ ಕಳಕಳಿ, ಶರಣರ ಜೀವನ ಮತ್ತು ಸಾಧನೆಯಲ್ಲಿ ಸಾಮಾಜಿಕ ಅಸಮಾನತೆಯ ವಿರುದ್ಧ ಅವರು ಅವಿರತವಾಗಿ ನಡೆಸಿದ ಹೋರಾಟಕ್ಕೆ ಬಹಳ ಮಹತ್ವವಿದೆ. ಅಂದಿನ ಸಮಾಜದಲ್ಲಿದ್ದ ಅಸಮಾನತೆ, ವರ್ಣನೀತಿ, ಜಾತಿ, ಸ್ತ್ರೀ ಪುರುಷ, ಉಚ್ಚಕಾರ್ಯ, ನೀಚ ವೃತ್ತಿಗಳೆಂಬ ತಾರತಮ್ಮ ವಿಪರೀತವಾಗಿ ಬೆಳೆದುನಿಂತ ಪರಿಣಾಮವಾಗಿ ಅಸಮಾನತೆ ವಿಜೃಂಭಿಸುತ್ತಿತ್ತು. ಭಾರತೀಯರು ವೈಯುಕ್ತಿಕವಾಗಿ ಸಬಲರು. ಸಾಮಾಜಿಕವಾಗಿ ದುರ್ಬಲರು ಎಂಬ ಪರಿಸ್ಥಿತಿ ನಿರ್ಮಾಣವಾಯಿತು. ಇಂತಹ ಸನ್ನಿವೇಶದಲ್ಲಿ ಸಬಲ ಸಮದರ್ಶಿತ್ವದ ಸಮಾಜ ನಿರ್ಮಾಣಕ್ಕಾಗಿ ವ್ಯಕ್ತಿ ಕಲ್ಯಾಣದೊಂದಿಗೆ ಸಮಾಜ ಕಲ್ಯಾಣವೂ ಅಗತ್ಯವೆಂದು ಸಾರಿ ಅವುಗಳ ನಡುವೆ ಅನುಪಮವಾದ ಸಾಂಗತ್ಯವೇರ್ಪಡುವಂತೆ ಮಾಡಿದ ಸಾಧನೆ ಶರಣರದು. ಈ ಉಭಯ ಕಲ್ಯಾಣವನ್ನು ಬಸವಣ್ಣನವರು ಲಿಂಗ ವ್ಯಸನ, ಜಂಗಮ ಪ್ರೇಮವೆಂದು ಕರೆದಿದ್ದಾರೆ.

### ಆರ್ಥಿಕ ಸಮಾನತೆ (or) ವರ್ಗ ಸಮಾನತೆ

ಶರಣರ ವಿಚಾರಧಾರೆಯನ್ನು ಕಾರ್ಲ್‌ಮಾರ್ಕ್ಸ್‌ರವರ ವಿಚಾರಧಾರೆಗೆ ಹೋಲಿಸಿರುವ ಕೆಲವು ಚಿಂತಕರು ಶರಣರ ಸಮಾನತೆಯ ಕಲ್ಪನೆಮುಖ್ಯವಾಗಿ ಆರ್ಥಿಕ ಸಮಾನತೆಯ ಅಂಶವನ್ನು ಒತ್ತಿ ಹೇಳ್ಮತ್ತದೆ ಎಂದಿದ್ದಾರೆ. ಸಾಮಾಜಿಕ ಸಮಾನತೆಗೆ ಮೂಲವಾದುದು ಆರ್ಥಿಕ ಸಮಾನತೆ ಎಂದು ಶರಣರು ನಂಬಿದ್ದರು. ವರ್ಗ ವಿಷಮತೆಯನ್ನು ಆಧರಿಸಿ ಶ್ರೀಮಂತ ಬಡವನೆಂಬ ತಾರತಮ್ಯವನ್ನ ತೊಡೆದುಹಾಕಲು ಶರಣರು ಮಾರ್ಕ್ಸ್‌ರಂತೆ ಕ್ರಾಂತಿಯ ಪರಿಹಾರ ನೀಡಲಿಲ್ಲ. ಅದಕ್ಕೆ ಬದಲಾಗಿ ನಿನಗೆ ಅಗತ್ಯಕ್ಕಿಂತ ಹೆಚ್ಚಿನದನ್ನು ಸ್ವೀಕರಿಸಬೇಡ ಎಂಬ ಸರಳ ಪರಿಹಾರವನ್ನು ಸೂಚಿಸಿದರು. “ಗುರುವಿಗೆ ತಾನು ದಾಸೋಹ ಲಿಂಗಕ್ಕೆ ಮನ ದಾಸೋಹ ಜಂಗಮಕ್ಕೆ ದನ ದಾಸೋಹ” ಮಾಡಬೇಕೆಂಬುದು ಶರಣರ ಸಮದರ್ಶಿತ್ವದ ಸಿದ್ಧಾಂತ.

### ಜಾತಿ ಸಮಾನತೆ

ಶರಣರು ಹ್ಮಟ್ಟಿನಿಂದಲೂ ಯಾರೂ ಮೇಲಲ್ಲ, ಕೀಳಲ್ಲ ಎಲ್ಲರೂ ಒಂದೇ ಪ್ರಪಂಚದ ಮಾನವ ಜೀವಿಗಳು ಎಂದು ಪ್ರಬಲವಾಗಿ ಪ್ರತಿಪಾದಿಸಿ ಜಾತಿ ಸಮಾನತೆಗೆ ಕಾರಣರಾಗಿದ್ದರೆ, ಜನನಕ್ಕೆ ಸಂಬಂಧಿಸಿದಂತೆ ಸಮಾನವಾದ ನೈಸರ್ಗಿಕ ನಿಯಮಗಳಿರುವಾಗ ವರ್ಣಭೇದದಲ್ಲಿ ಯಾವ ಹುರುಳಿದೆ ಎಂದು ವರ್ಣ ತಾರತಮ್ಯವನ್ನು ಪ್ರಶ್ನಿಸುವುದರ ಮೂಲಕ ಸಮಾನತೆಯ ಸಮಾಜದ ಸ್ಥಾಪನೆಗೆ ಅನುವು ಮಾಡಿಕೊಟ್ಟಿದ್ದಾರೆ. “ಕೊಲುವನೆ ಮಾದಿಗ” ಹೊಲಸು ತಿಂಬುವವನೆ ಹೊಲೆಯ ಎಂದು ಅವರು ಸಾರಿದರು. ಹ್ಮಟ್ಟಿದ ಮನುಷ್ಯರೆಲ್ಲರೂ ಜಾತಿ, ಮತ, ಪಂಗಡಗಳ ಭೇದವಿಲ್ಲದೆ ಸಮಾನವಾಗಿಯೇ ಇರುತ್ತಾರೆ. ಲಿಂಗ ಧರಿಸಿದ ಮೇಲೆ ಹೊಲೆಯಲ್ಲ, ಮೇಲಿಲ್ಲ, ಕೀಳಿಲ್ಲ – ಎಲ್ಲರೂ ಸಮಾನರು ಎಂದು ಅವರು ಭೋದಿಸಿದರು.

### ಲಿಂಗ ಸಮಾನತೆ

ಶರಣರ ಆಗಮನಕ್ಕಿಂತ ಪ್ರೆದಲು ಭಾರತೀಯ ಸಮಾಜದಲ್ಲಿ ಅದರಲ್ಲಿಯೂ ಸ್ಮೃತಿಗಳ ಕಾಲಾನಂತರದಲ್ಲಿ ಸ್ತ್ರೀಯರ ಸ್ಥಾನಮಾನಗಳು ಅಧೋಗತಿಗಿಳಿದವು. ಪುರಷರ ಶ್ರೇಷ್ಠತೆ, ಸ್ತ್ರೀಯರ ಹೀನತೆಯನ್ನ ಒಪ್ಪಿಕೊಂಡು ಬಂದ ಸಾಮಾಜಿಕ ವ್ಯವಸ್ಥೆಯಾಗಿತ್ತು. ಸ್ತ್ರೀಯರು ಸ್ವಾತಂತ್ರಕ್ಕೆ ಅರ್ಹರಲ್ಲ ಎಂಬ ವಾದವು ಕೇಳಿ ಬರುತ್ತಿತ್ತು. ಆದರೆ ಇಂದು ಪ್ರಚಲಿತವಿರುವ ಸ್ತ್ರೀ ಸ್ವಾತಂತ್ರ ಮತ್ತು ಸ್ತ್ರೀ ವಿಮೋಚನಾ ಚಳುವಳಿಗೆ ಬಸವೇಶ್ವರರು ಅಂದೇ ನಾಂದಿ ಹಾಡಿದ್ದರು. ಸ್ತ್ರೀಯರ ಧಾರ್ಮಿಕ ಮತ್ತು ಸಾಮಾಜಿಕ ಸ್ವತಂತ್ರದ ಬಗ್ಗೆ ಒತ್ತು ನೀಡಿದ ಶರಣರು ಸ್ತ್ರೀಯರಿಗೂ ಪುರುಷರಂತೆ, ಲಿಂಗ ಧರಿಸುವ ಮತ್ತು ಶಿವಾರಾಧನೆ ಮಾಡುವ ಹಕ್ಕು ನೀಡಿದರು.

ಪುನರ್ ವಿವಾಹಕ್ಕೆ ಅವಕಾಶವಿರಬೇಕೆಂದು ಮತ್ತು ಸ್ತ್ರೀ ಸಾಮಾರ್ಥ್ಯ ಮತ್ತು ಸ್ತ್ರೀತ್ವವನ್ನು ಗೌರವಿಸಬೇಕೆಂದರು. ಅನುಭವ ಮಂಟಪವನ್ನು ಸ್ಥಾಪಿಸಿ ಸ್ತ್ರೀಯರು ಸೇರಿದಂತೆ ಎಲ್ಲ ಜಾತಿ, ಜನಾಂಗ ಮತ್ತು ಧರ್ಮದ ಜನರು ಸಕ್ರಿಯವಾಗಿ ಚರ್ಚಿಸಲು, ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ಮಾಡಿಕೊಟ್ಟರು. ಅನುಭವ ಮಂಟಪದಲ್ಲಿ ಅಲ್ಲಮ ಪ್ರಭುಗಳಿಗೆ ನೀಡುತ್ತಿದ್ದ ಪ್ರಾಮುಖ್ಯತೆ ಹಾಗೂ ಗೌರವವನ್ನು ಅಕ್ಕಮಹಾದೇವಿಗೂ ನೀಡಲಾಗುತ್ತಿತ್ತು. ಇದು ಶರಣರ ನಿಜವಾದ ಸಮದರ್ಶಿತ್ವ.

**ದಾಸೋಹ ಸಮಾನತೆ**

ಶರಣರ ಸಮದರ್ಶಿತ್ವದ ಪರಿಕಲ್ಪನೆಯಲ್ಲಿ ಅನುಭವ ಮಂಟಪದಷ್ಟೇ ಪ್ರಾಮುಖ್ಯತೆಯನ್ನು ದಾಸೋಹ ವ್ಯವಸ್ಥೆಯು ಪಡೆದುಕೊಂಡಿದೆ. ದಾಸೋಹದಲ್ಲಿ ಒಂದೇ ಸ್ಥಳದಲ್ಲಿ ಸಹಭೋಜನ ವ್ಯವಸ್ಥೆಯನ್ನು ಶರಣರು ಜಾರಿಗೆ ತಂದರು. ದಾಸೋಹಕ್ಕೆ ಎಲ್ಲಾ ಜಾತಿಯವರಿಗೂ ಮುಕ್ತ ಪ್ರವೇಶವಿದ್ದು, ಯಾವುದೇ ತಾರತಮ್ಯ ಮಾಡುತ್ತಿರಲಿಲ್ಲ. ಹಾಗೂ ಹಂಚಿ ಊಟ ಮಾಡುವುದರಲ್ಲಿಯೇ ಮಾನವನ ಸಂತೋಷವು ಅಡಗಿರುತ್ತದೆ ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟ ಮಹಾನ್ ಪುರುಷರೆಂದರೆ 12ನೇ ಶತಮಾನದ ಶಿವಶರಣರು.

ಹೀಗೆ ಶರಣರು ಸಮಾನತೆಯ ತತ್ವವನ್ನು ಮತ್ತು ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಪ್ರತಿಪಾದಿಸಿದ್ದಾರೆ. ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ರಾಜಕೀಯ ಕ್ರಾಂತಿಯನ್ನು ಬಯಸಿದವರು. ಲಿಂಗ ಸಮಾನತೆ, ಜಾತಿ ಸಮಾನತೆ, ವ್ಯಕ್ತಿ ಸ್ವಾತಂತ್ರ, ಅಸ್ಪೃಶ್ಯತೆ ನಿಷೇಧ, ಹಾಗೂ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಮಾನತೆಯನ್ನು ಕೇವಲ ಭೋದಿಸಲಿಲ್ಲ. ಆಚರಣೆಗೆ ತರಲು ಪ್ರಯತ್ನಿಸಿದವರು. ಇದು ಶರಣರ ನಿಜವಾದ ಸಾಮಾಜಿಕ ಕಳಕಳಿ ಮತ್ತು ಸಮದರ್ಶಿತ್ವ ಎನ್ನಬಹುದು. ಕೇವಲ ಧಾರ್ಮಿಕ ಸುಧಾರಣೆಯಿಂದ ಮಾತ್ರವೇ ಸಮಾಜದಲ್ಲಿ ಸಮಾನತೆಯನ್ನು ತರಲು ಸಾಧ್ಯವಿಲ್ಲ ಎಂದರಿತಿದ್ದ ಶರಣರು ಸಾಮಾಜಿಕ ಸುಧಾರಣೆಗೆ ಒತ್ತು ನೀಡುತ್ತಿದ್ದರು. ಒಟ್ಟಿನಲ್ಲಿ ಶರಣರು ತಮ್ಮ ಸಮದರ್ಶಿತ್ವದಿಂದ ಸಮಾಜದ ಜೈವಿಕ ಲಕ್ಷಣಗಳ ಹೊರತಾದ ಲಿಂಗ ಸಮಾನತೆ, ಸ್ತ್ರೀಯರಿಗೆ ಧಾರ್ಮಿಕ ಸ್ವಾತಂತ್ರ, ಸಾಮಾಜಿಕ ಮತ್ತು ಕೌಟುಂಬಿಕ ಸ್ವಾತಂತ್ರ, ಸ್ತ್ರೀಯರ ಅಸಾಮರ್ಥ್ಯಗಳ ನಿರ್ಮೂಲನೆ, ಸ್ತ್ರೀಯರ

ಸಮುದಾಯಕ್ಕೆ ಗೌರವ ಸಲ್ಲಿಸಬೇಕೆಂಬ ಆದರ್ಶ ಹಾಗೂ ವಚನ ಚಳುವಳಿಯಲ್ಲಿ ಸ್ತ್ರೀಯರ ಸಹಭಾಗಿತ್ವ ಮುಂತಾದ ಮಾನವೀಯ ಮತ್ತು ಉತ್ಕೃಷ್ಟ ಗುಣಗಳನ್ನು ಪ್ರತಿಪಾದಿಸಿ ಸಮಾಜದಲ್ಲಿ ಶಾಂತಿ, ಅಹಿಂಸೆ, ಸಮಾನತೆ, ಮತ್ತು ಸಮದರ್ಶಿತ್ವದ ಭಾವನೆಯ ಬೆಳವಣಿಗೆಗೆ ಕಾರಣರಾದ ಶಿವಶರಣರು ಪ್ರಾತಃಸ್ಮರಣೀಯರೆಂದು ಗೌರವಿಸೋಣವೇ.

**ಆಧಾರ ಗ್ರಂಥಗಳು**


1. ಬಾಲಚಂದ್ರ ಜಯಶೆಟ್ಟಿ, ಶರಣ ಸಾಹಿತ್ಯದ ಸುತ್ತಮುತ್ತ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, 2010
2. ಡಾ.ಸಿದ್ಧಯ್ಯ ಪುರಾಣಿಕ, ಶರಣ ಚರಿತಾಮೃತ, ಸಪ್ನ ಬುಕ್ ಹೌಸ್ ಪ್ರೈವೆಟ್ ಲಿ., ಬೆಂಗಳೂರು, 2016
3. ಎಚ್. ತಿಪ್ಪೆರುದ್ರಸ್ವಾಮಿ, ಕರ್ನಾಟಕ ಶರಣ ಕಥಾಮ್ರುತ, ಡಿವಿಕೆ ಮೂರ್ತಿ, ಮೈಸೂರು, 2009
4. ಎಂ.ಆರ್. ಶ್ರೀನಿವಾಸ ಮೂರ್ತಿ, ವಚನ ಧರ್ಮಸಾರ, ಕನ್ನಡ ಸಾಹಿತ್ಯ ಪರಿಷತ್ತು, 1991
5. ಡಾ. ಫ.ಗು. ಹಳಕಟ್ಟಿ (ಸಂಗ್ರಹ), ಶಿವಾನುಭವ, 1959
೬. ಡಾ. ಫ.ಗು. ಹಳಕಟ್ಟಿ, ವಚನ ಶಾಸ್ತ್ರ ಸಾರ, ಹಿತಚಿಂತಕ ಪ್ರಿಟಿಂಗ್ ಪ್ರೆಸ್, ವಿಜಾಪುರ, 1939